## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ನಯಾಜ್ ಶರೀಫ್ | |
| ತಂದೆಯ ಹೆಸರು | ನಸರುಲ್ಲಾ ಶರೀಫ್ | ಸಾಕ್ಷಿಗೆ ದಿಃ **11.10.2021** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **32** ವರ್ಷ | |
| ಉದ್ಯೋಗ | ಫರ್ನಿಚರ್ ಪ್ಯಾಕ್ಟರಿ | ಪಿ.ಡಬ್ಲ್ಯೂ **-03** |
| ವಾಸ ಸ್ಥಳ | ರಾಜೀವನಗರ, ಮೈಸೂರು | ಸಿ.ಡಬ್ಲ್ಯೂ **-03** |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಸ್ಥಳದ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಶವದ ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಶವ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ದಿಃ 25.07.2019 ರಂದು ನಾನು ಘಟನಾ ನಡೆದ ಸ್ಥಳಕ್ಕೆ 3 ಗಂಟೆಗೆ ಹೋಗಿರುತ್ತೇನೆ. ನನ್ನ ಪರಿಚಯಸ್ಥರು ಅಲ್ಲೇ ಸ್ಥಳದಲ್ಲಿ ಇದ್ದರು, ಮೃತಳ ಕುತ್ತಿಗೆ ಹಿಂಭಾಗ, ಮತ್ತು ಮುಂಭಾಗಕ್ಕೆ ಮತ್ತು ಪಕ್ಕೆಲುಬಿನ ಹತ್ತಿರ ಗಾಯಗಳು ಇದ್ದವು. ಶವವು ಮನೆಯ ಹಾಲ್ ನಲ್ಲಿ ಬಿದ್ದಿತ್ತು. ಸಾಕ್ಷಿಯು ಶವದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5 ರಿಂದ ನಿಪಿ-7 ಎಂದು ಗುರುತಿಸಲಾಗಿದೆ. ನಾನು 3 ಗಂಟೆಯಿಂದ 6 ಗಂಟೆಯ ವರೆಗೆ ಸ್ಥಳದಲ್ಲೇ ಇದ್ದೆನು. ಸ್ಥಳದಿಂದ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಶವ ಪಂಚನಾಮೆಯ ಕಾಲಕ್ಕೆ ಪೊಲೀಸರು ರಕ್ತದ ಕಲೆಗಳನ್ನು ಹತ್ತಿಯ ಮೂಲಕ ಶೇಖರಣೆ ಮಾಡಿದ್ದರು ಎಂದರೆ ಸರಿ ಇದೆ. ಕೃತ್ಯ ನಡೆದ ಸ್ಥಳದಲ್ಲಿ ಶೇಖರಿಸಿದ ರಕ್ತ ಮಾದರಿಯ ಸ್ವಾಬ್ ನ್ನು ಎಂ.ಓ-1 ಎಂದು ಗುರುತಿಸಲಾಯಿತು.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಕ್ತದ ಮಾದರಿಯನ್ನು ಎಂ.ಓ-1 ನ್ನು ಸ್ಥಳದಿಂದ ಶೇಖರಣೆ ಮಾಡಿಲ್ಲ. ಪಂಚನಾಮೆಗಳ ಮೇಲೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಇದೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು